ತಾಲ್ಲೂಕುಗಳಲ್ಲಿ ರಚಿಸಲಾಗಿದೆ.

## ಸುಗ್ರಾಮ ಏನೆಲ್ಲಾ ಸಾಧನೆಗಳನ್ನು ಮಾಡಿದೆ?

ಸುಗ್ರಾಮವು ಉತ್ತಮ ನಿಯಮಾವಳಿಗಳನ್ನು ತರುವ ನಿಟ್ಟಿನಲ್ಲಿ ಮತ್ತು ಮೇಲ್ವಿಚಾರಣೆ ಮೂಲಕ ಸರ್ಕಾರದ ಪ್ರಮುಖ ಕಾರ್ಯಕ್ರಮಗಳು, ಯೋಜನೆಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ವಕಾಲತ್ತು ಮಾಡುತ್ತಿದೆ. ಈ ರೀತಿಯಾಗಿ 'ತಳಹದಿಯ ಸಮಸ್ಯೆಗಳ' ಬಗ್ಗೆ ವಕಾಲತ್ತು ಮಾಡುತ್ತ, ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಕೆಲವು ಸಮಸ್ಯೆಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಯಶಸ್ವಿಯಾಗಿದೆ. ಈ



ರೀತಿಯಾಗಿ, ಸುಗ್ರಾಮವು ಈ ಕೆಳಕಂಡ ಸಾಧನೆಗಳನ್ನು ಮಾಡುವಲ್ಲಿ ಸಫಲವಾಗಿದೆ:

- ✓ ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯನ್ನು 30 ತಿಂಗಳಿಂದ 5 ವರ್ಷಕ್ಕೆ ಹೆಚ್ಚಿಸುವ ಕುರಿತು
- ✓ ಸ್ಥಳೀಯ ಸರ್ಕಾರಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು 33% ರಿಂದ 50% ಕ್ಕೆ ಹೆಚ್ಚಿಸುವಕುರಿತು
- ✓ ಒಂದೇ ವರ್ಗಕ್ಕೆ 2 ಚುನಾವಣಾ ಅವಧಿಯವರೆವಿಗೂ ಮೀಸಲಾತಿಯನ್ನು ಕಾಯ್ದಿರುಸುವ ಕುರಿತು
- ✓ ಸಮುದಾಯಕ್ಕೆಎಲ್ಲಾ ಹಕ್ಕುಗಳು ಮತ್ತು ಬಾಧ್ಯತೆಗಳು ನಿರ್ದಿಷ್ಟವಾಗಿದೊರಕುವಂತೆ ಮಾಡುವುದು – ಸರ್ಕಾರದ ಯೋಜನೆಗಳಿಗೆ ಸರಿಯಾದ ಫಲಾನುಭವಿಗಳನ್ನು ಆಯ್ಕೆ ಮಾಡುವಲ್ಲಿ ಸಫಲರಾಗಿ 'ಕಟ್ಟಕಡೆಯ ಕುಟುಂಬಕ್ಕೂ' ದೊರಕುವಂತೆ ಮಾಡವುದು
- ✓ ಉತ್ತಮ ಹೊಣೆಗಾರಿಕೆ, ಉತ್ತಮ ಆಡಳಿತ ಮತ್ತು ವಿಕೇಂದ್ರೀಕರಣವನ್ನು ಖಾತರಿಗೊಳಿಸುವ ನಿಟ್ಟಿನಲ್ಲಿ ಸ್ಥಳೀಯ ಸರ್ಕಾರದ ಪರಿಧಿಗಳನ್ನು ವಿಸ್ತರಿಸಿರುವುದು
- ✓ ಗ್ರಾಮ ಪಂಚಾಯತಿಗಳು ಮತ್ತುತಾಲ್ಲೂಕು ಮಟ್ಟದಲ್ಲಿ ಭ್ರಷ್ಟಾಚಾರದ ಬಗ್ಗೆ ಹೋರಾಟ ನಡೆಸುವುದು
- ✓ ದಿ ಹಂಗರ್ ಪ್ರಾಜೆಕ್ ್ಕರ್ನಾಟಕದ ನಿರಂತರ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳಿಂದಾಗಿ ಸುಗ್ರಾಮದ ಸದಸ್ಯರು ತಮ್ಮ ಹಕ್ಕು ಮತ್ತು ಜವಾಬ್ದಾರಿಗಳನ್ನು ಅರಿಯಲು ಅನುವು ಮಾಡಿದ್ದು, ಇದರಿಂದ ಗ್ರಾಮ ಪಂಚಾಯತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹಾಗೂ ಪಂಚಾಯತಿ ಸಂಬಂಧಿತ ನಿರ್ಧಾರಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಫಲಕಾರಿಯಾಗಿದೆ

ಈ ರೀತಿಯಾಗಿ ಪಂಚಾಯತಿಗೆ ಸಂಬಂಧಿಸಿದ


**ಸುಗ್ರಾಮ**

#4, ಎರಡನೇ ಮಹಡಿ, ಗಣೇಶ್ ಪೂಜಾ ಹೌಸ್
ಮುಂಭಾಗ, ಬರ್ಲಿ ಸ್ಟ್ರೀಟ್ ಕ್ರಾಸ್,
ಲಾಂಗ್ ಫರ್ಡ್‌ಟೌನ್, ಶಾಂತಿನಗರ,
ಬೆಂಗಳೂರು–560025
ಈ ಮೇಲ್–padananth.sugrama@gmail.com
www.sugrama.org


# ಸುಗ್ರಾಮ

## ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ ಕರ್ನಾಟಕ

ಒಟ್ಟಾಗಿ ಬರುವುದು ಪ್ರಾರಂಭ
ಒಟ್ಟಾಗಿ ಕಲಿಯುವುದು ಒಂದು ಪ್ರಕ್ರಿಯೆ
ಒಟ್ಟಾಗಿ ಐಕ್ಯತೆಯಿಂದ ಕೆಲಸ ಮಾಡುವುದು
ಪರಿವರ್ತನೆ ಮತ್ತು ಯಶಸ್ಸು



ಕರ್ನಾಟಕದಲ್ಲಿ ಉತ್ತಮ ಆಡಳಿತ ಮತ್ತು ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಸುಧಾರಣೆ ತರುವ ರೀತಿಯಲ್ಲಿ ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳು ತಮ್ಮ ಹಕ್ಕುಗಳನ್ನು ಪರಿಣಾಮಕಾರಿ ರೀತಿಯಲ್ಲಿ ಚಲಾಯಿಸುವಂತಹ ಹೊಣೆಗಾರಿಕೆಯನ್ನು ಸುಗ್ರಾಮ ನೀಡಿದೆ.

## ಸುಗ್ರಾಮ ಎಂದರೇನು?

**ಪರಿಚಯ:**

ಸುಗ್ರಾಮ–ಗ್ರಾಮ ಪಂಚಾಯತ್‌ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ, ಕರ್ನಾಟಕವು, ಕರ್ನಾಟಕದ ಚುನಾಯಿತ ಮಹಿಳಾ ನಾಯಕಿಯರ ಹಕ್ಕು ಮತ್ತು ಆಸಕ್ತಿಗಳನ್ನು ಪ್ರತಿನಿಧಿಸುತ್ತಿರುವ ವೇದಿಕೆಯಾಗಿದ್ದು, ಕರ್ನಾಟಕದ ಸಂಘಗಳ ನೋಂದಣಿ ಕಾಯ್ದೆ, 1961 ರಲ್ಲಿ ನೋಂದಾಯಿಸಲಾಗಿದೆ. ಚುನಾಯಿತ ಮಹಿಳಾ ಪ್ರತಿನಿಧಿಗಳು, ಉತ್ತಮ ನೀತಿ/ನಿಯಮಾವಳಿಗಾಗಿ ಹಾಗೂ ಈ ನಿಯಮಾವಳಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲುವ ಕಾಲತ್ತು ಮಾಡುವುದು ಮತ್ತು ಕಾಲ ಕಾಲಕ್ಕೆ ಬದಲಾವಣೆಗಳನ್ನು ತರುವಲ್ಲಿ ಐಕ್ಯಮತದಿಂದ ಒಟ್ಟಾಗಿ ಧನಿಗೂಡಿಸಲು ಸುಗ್ರಾಮ ಒಂದು ವೇದಿಕೆಯಾಗಿದೆ.

**ದೃಷ್ಟಿ:**

ಲಿಂಗ ಸಮಾನತೆ ಮತ್ತು ನ್ಯಾಯಯುತ ಸಮಾಜದಲ್ಲಿ ಸಶಕ್ತ ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳು

**ಧ್ಯೇಯ:**

ಗ್ರಾಮ ಪಂಚಾಯತ್‌ಗಳ ಸಮಗ್ರ ಅಭಿವೃದ್ಧಿಗೆ ಒಗ್ಗಟ್ಟಿನಿಂದ ವಕಾಲತ್ತು ನಡೆಸುವುದು ಮತ್ತು ಉತ್ತಮ ಆಡಳಿತವನ್ನು ಆಚರಣೆಗೆ ತರಲು ಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳನ್ನು ಸಶಕ್ತಗೊಳಿಸುವುದು.

**ಉದ್ದೇಶ:**

- ಚುನಾಯಿತ ಮಹಿಳಾ ಪ್ರತಿನಿಧಿಗಳು ಗ್ರಾಮ ಪಂಚಾಯತ್‌ನಲ್ಲಿ ಕ್ರಿಯಾಶೀಲ ಮತ್ತು ಪರಿಣಾಮಕಾರಿ ನಾಯಕರಾಗಲು ಉತ್ತೇಜನ ನೀಡುವುದು
- ಚುನಾಯಿತ ಮಹಿಳಾ ಪ್ರತಿನಿಧಿಗಳು ಗ್ರಾಮ ಪಂಚಾಯತ್‌ಗೆ ಸಂಬಂಧಿಸಿದ ಸವಾಲುಗಳನ್ನು ಎದುರಿಸುವಲ್ಲಿ ಬೆಂಬಲ ನೀಡುವುದು
- ರಾಜ್ಯ ಸರ್ಕಾರದ ನೀತಿಗಳು ಗ್ರಾಮ ಪಂಚಾಯತ್‌ಗಳ ಮೇಲೆ ಬೀರುವ ಪರಿಣಾಮಗಳನ್ನು ವಿಶ್ಲೇಷಿಸುವುದು ಮತ್ತು ಸುಗ್ರಾಮ ಕರ್ನಾಟಕದ ಸದಸ್ಯರುಗಳ ಹಿತಾಸಕ್ತಿಗಳಿಗನು ಗುಣವಾಗಿ ವಕಾಲತ್ತು ನಡೆಸುವುದು
- ಸುಗ್ರಾಮ ಕರ್ನಾಟಕದ ಸದಸ್ಯರಿಗೆ ಪಂಚಾಯತ್‌ರಾಜ್ ಸಂಸ್ಥೆ ಕುರಿತಂತೆ ಸರ್ಕಾರ ಹೊರಡಿಸುವ ಸೂಚನೆ/ಠರಾವು ಮತ್ತು ಮಾಹಿತಿಗಳನ್ನು ಪ್ರಸರಿಸುವುದು
- ಸಾಮಾಜಿಕ ಸಮಸ್ಯೆ ಮತ್ತು ಲಿಂಗತ್ವ ಅಸಮಾನತೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವುದು.

## ಸುಗ್ರಾಮ ಏಕೆ ಬೇಕು?

ತಲತಲಾಂತರದಿಂದ ಬಂದ ಪುರುಷರ ಹಿಡಿತ ಹಾಗೂ ಅಸಮಾನತೆಯ ವ್ಯವಸ್ಥೆಯಲ್ಲಿ ಸರ್ಕಾರದ ನೀತಿ ನಿಯಮಗಳಿಂದ ಅವಕಾಶ ಪಡೆದು, ಪಂಚಾಯತ್ ವ್ಯವಸ್ಥೆಯಲ್ಲಿಚುನಾಯಿತ ಮಹಿಳಾ ಪ್ರತಿನಿಧಿಗಳು ಕೆಲಸ ಮಾಡುವ ಸಂದರ್ಭಗಳಲ್ಲಿ ಪುರುಷ ಸಹಪಾಠಿಗಳಿಂದ ಬೆಂಬಲ ಸಿಗದಿರುವುದು ಅಥವಾ ಮಾನಸಿಕ/ದೈಹಿಕ ಹಿಂಸೆಗೊಳಗಾಗುವುದು, ಭಾಗವಹಿಸಲು ಅವಕಾಶ ನೀಡದಿರುವುದು ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಅವರ ಅಭಿಪ್ರಾಯಗಳನ್ನು ಪಡೆಯದಿರುವುದು, ಈ ಎಲ್ಲಾ ಕಾರಣಗಳಿಗಾಗಿ, ಚುನಾಯಿತ ಮಹಿಳಾ ಸದಸ್ಯರು ತಮ್ಮದೇ ಆದ ಒಂದು ವೇದಿಕೆಯ ಅವಶ್ಯಕತೆ ಇದೆಯೆಂದು ಮನಗಂಡರು. ಸಂಘಟಿತಾತ್ಮಕವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ತಮ್ಮ ಧ್ವನಿಯ ಅವಶ್ಯಕತೆಯಿದೆಯೆಂದು ಅಭಿಪ್ರಾಯ ಪಟ್ಟರು. 2007ರಿಂದ ದಿ ಹಂಗರ್ ಪ್ರಾಜೆಕ್ಟ್ ಸಂಸ್ಥೆಯು ನೀಡುತ್ತಿದ್ದ ತರಬೇತಿಗಳು ಸದಸ್ಯರ ಆಲೋಚನೆಯನ್ನು ಪರಿಗಣಿಸಿ, ಒಟ್ಟುಗೂಡಿಸಿದ ಫಲವಾಗಿ, ಸುಗ್ರಾಮಗ್ರಾಮ ಪಂಚಾಯತ್ ಚುನಾಯಿತ ಮಹಿಳಾ ಪ್ರತಿನಿಧಿಗಳ ಸಂಘ, ಕರ್ನಾಟಕವನ್ನು 2009ರಲ್ಲಿ ರಚಿಸಲಾಯಿತು. ಇದಕ್ಕೂ ಮುನ್ನ ಈ ಸಂಘಟನೆಯನ್ನು 'ಫೆಡ್ಕೊ' (ಚುನಾಯಿತ ಮಹಿಳೆಯರ ಒಕ್ಕೂಟ)ವೆಂದು ಕರೆಯಲ್ಪಡಲಾಗುತ್ತಿತ್ತು. ಮೇ 27, 2009 ರಂದು ಆಯೋಜಿಸಲಾದ ಮೊದಲ 'ಸಮಾವೇಶ' (ಸರ್ವ ಸದಸ್ಯರ ಸಭೆಯ ಮಾದರಿಯಂತೆ) ರಂದು ಅಧಿಕೃತವಾಗಿ ಸ್ಥಾಪಿಸಲಾಯಿತು.

## ಸುಗ್ರಾಮಕ್ಕೆಯಾರೆಲ್ಲಾ ಸೇರಬಹುದು? ಚುನಾಯಿತ ಮಹಿಳಾ ಪ್ರತಿನಿಧಿಗಳು ಸುಗ್ರಾಮದ ಸದಸ್ಯರಾಗುವುದು ಹೇಗೆ?

- ✓ ನಿಮ್ಮ ಗ್ರಾಮ ಪಂಚಾಯಿತಿಯಲ್ಲಿ ನೀವು ಹಾಲಿ ಚುನಾಯಿತ ಮಹಿಳಾ ಪ್ರತಿನಿಧಿಗಳಾಗಿದ್ದಲ್ಲಿ (2015–2020)
- ✓ ನೀವು 2010–2015ರ ಗ್ರಾಮ ಪಂಚಾಯತ್ ಚುನಾವಣೆಯ ಅವಧಿಯಲ್ಲಿ ಚುನಾಯಿತ ಮಹಿಳಾ ಪ್ರತಿನಿಧಿಗಳಾಗಿದ್ದಲ್ಲಿ

ಒಬ್ಬ ಚುನಾಯಿತ ಮಹಿಳಾ ಸದಸ್ಯೆಯುರೂ. 100/– (ವಾರ್ಷಿಕವಾಗಿ ನವೀಕರಣಗೊಳಿಸಬೇಕಿರುವ) ಸದಸ್ಯತ್ವ ಶುಲ್ಕವನ್ನು ಪಾವತಿಸಿ, ಸುಗ್ರಾಮದ ಸದಸ್ಯತ್ವವನ್ನು ಪಡೆಯಬಹುದು.

## ಸುಗ್ರಾಮವನ್ನು ಹೇಗೆ ರಚಿಸಲಾಗಿದೆ – ಸುಗ್ರಾಮದ ಆಡಳಿತ ವಿನ್ಯಾಸ?

ಸುಗ್ರಾಮದ ಆಡಳಿತ ವಿನ್ಯಾಸವು ಎರಡು ಸ್ತರಗಳದ್ದಾಗಿದೆ ತಾಲ್ಲೂಕು ಮತ್ತು ರಾಜ್ಯ ಮಟ್ಟ, ಆಯ್ದ ಗ್ರಾಮ ಪಂಚಾಯತಿಗಳಿಂದ ಸುಗ್ರಾಮದ ಸದಸ್ಯತ್ವ ಪಡೆದಿರುವ ಪ್ರತಿ ಸುಗ್ರಾಮದ ಸದಸ್ಯರನ್ನು ತಾಲ್ಲೂಕು ಸಂಘಗಳು ಒಳಗೊಂಡಿರುವುದು. ಪ್ರತಿ ತಾಲ್ಲೂಕು ಸಂಘವು 7 ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡುವುದು ಮತ್ತು ಈ ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರಿಂದ ಒಬ್ಬ ಜಿಲ್ಲಾ ಪ್ರತಿನಿಧಿಯನ್ನು ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಲಾಗುವುದು. ರಾಜ್ಯ ಮಟ್ಟದ ಸಂಚಾಲನಾ ಸಮಿತಿಯು ಸುಗ್ರಾಮ ರಚಿತವಾದ ಜಿಲ್ಲೆಗಳ ಪ್ರತಿನಿಧಿಗಳನ್ನೊಳಗೊಂಡಿರುವುದು. ಪ್ರಸಕ್ತವಾಗಿ, ಸುಗ್ರಾಮವನ್ನು ಕರ್ನಾಟಕದ 12 ಜಿಲ್ಲೆಗಳ 25